ಕುಮಾರಪ್ಪ ಕೆಳಗೆ ಕುಳಿತ. ನಂತರ ಬಳ್ಳಕ್ಕೆ ಸುತ್ತಿದ್ದ ಬಟ್ಟೆಯನ್ನು ಬಿಚ್ಚಿದ. ಸೊಂಟದಲ್ಲಿ ಸಿಕ್ಕಿಸಿಕೊಂಡು ತಂದಿದ್ದ ಪುಟ್ಟ ಮರದ ಸೌಟನ್ನು ಹೊರತೆಗೆದ. ಅದರಿಂದ ಗಂಜಿಯನ್ನು ಹುಚ್ಚನ ಬಾಯಿಯನ್ನು ಒತ್ತಾಯದಿಂದ ಅಗಲಿಸಿ ಮೆಲ್ಲಗೆ ಸುರಿದ. ಹುಚ್ಚ ಗುಟುಕು ಗುಟುಕಾಗಿ ಅದನ್ನು ನುಂಗಿದ. ನಿಧಾನಕ್ಕೆ ತಾಳ್ಮೆಯಿಂದ ಸೌಟನ್ನು ಬಳಸುತ್ತ ಅಷ್ಟೂ ಗಂಜಿಯನ್ನು ಕುಡಿಸಿದ ಆತ. ಬಳ್ಳ ಬರಿದಾಯಿತು.

ಮತ್ತೆ ನರಿಗಳು ಬರಬಹುದೆಂದು ಕುಮಾರಪ್ಪ ಹುಚ್ಚನ ಪಕ್ಕದಲ್ಲಿಯೇ ಕುಳಿತುಬಿಟ್ಟ. ನಡುರಾತ್ರಿ ದಾಟಿದ ಮೇಲೆ ಬೆಳುದಿಂಗಳ ಬೆಳಕು ಬಂತು. ಆತ ಹುಚ್ಚನ ಹತ್ತಿರವೇ ಮಲಗಿ ನಿದ್ದೆ ಮಾಡಿದ. ಬೆಳಗ್ಗೆ ಬಿಸಿಲು ಮೈಮೇಲೆ ಬಿದ್ದಾಗ ಆತನಿಗೆ ಎಚ್ಚರವಾಯಿತು. ಎದ್ದು ಮರಳನ್ನು ಕೊಡಗಿಕೊಂಡು, ಲಾಟೀನು ಆರಿಸಿ ಮನೆಯ ಕಡೆ ಹೊರಡುತ್ತಾ ಹುಚ್ಚನ ಕಡೆಗೆ ಒಮ್ಮೆ ನೋಡಿದ. ಆತ ಕದಲುತಿದ್ದಾನೆ. 'ಇನ್ನೇನೂ ಹೆದರಬೇಕಿಲ್ಲ, ಬದುಕುತ್ತಾನೆ' ಎಂದುಕೊಳ್ಳುತ್ತಾ ಮನೆಯ ಕಡೆ ಹೆಜ್ಜೆ ಹಾಕಿದ.

ಮನೆ ತಲುಪಿ ಮುಖ ತೊಳೆದು ಗಂಜಿ ಕುಡಿಯುವ ವೇಳೆಗೆ ಸುದ್ದಿ ಬಂತು. ಸಮುದ್ರ ತೀರಕ್ಕೆ ಹೋಗಿದ್ದ ಮಕ್ಕಳಿಗೆ ಹುಚ್ಚ ಮೇಲಕ್ಕೆದ್ದು ಗ್ರಾಮದ ಕಡೆಗೆ ಬರುತ್ತಿರುವುದು ಕಾಣಿಸಿತ್ತು. ಮಕ್ಕಳಿಗೆ ಇನ್ನೇನು ಬೇಕು, ಗಡಿಬಿಡಿಯಿಂದ ಹಳ್ಳಿಗೆ ಓಡಿ ಬಂದು, 'ಕಡಲುಗಳ್ಳ ಎದ್ದಿದ್ದಾನೆ, ಇಲ್ಲಿಗೇ ಬರುತ್ತಿದ್ದಾನೆ' ಎಂದು ಜೋರಾಗಿ ಕೂಗಿದರು. ಅವರಿಗೆ ಹುಚ್ಚ ಎನ್ನುವುದಕ್ಕಿಂತ ಕಡಲುಗಳ್ಳ ಎನ್ನುವುದೇ ಚೆನ್ನಾಗಿದೆ.

ದೂರದಲ್ಲಿ ಹುಚ್ಚ ಮರಳಿನ ಮೇಲೆ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ನಡೆದು ಬರುತ್ತಿದ್ದಾನೆ. ಆತ ಸಾಮಾನ್ಯ ಮನುಷ್ಯನಂತೆ ನಡೆಯುತ್ತಿಲ್ಲ. ನಾಲ್ಕು ಕಾಲಿನ ಪ್ರಾಣಿಯ ಹಾಗೆ ಕಾಲು ದೂರ ದೂರ ಇಡುತ್ತಾ ಬಾಗಿ ಕೈಗಳನ್ನಾಡಿಸುತ್ತಾ ಬರುತ್ತಿದ್ದಾನೆ.

ನೇರವಾಗಿ ಅವನು ರಾಮಾಲಯದ ಎದುರಿಗೆ ಬಂದು ನಿಂತ. ಮಕ್ಕಳು ಹೆದರುತ್ತ ಅಲ್ಲಿಂದ ಓಟಕಿತ್ತರು. ಹೆಂಗಸರೆಲ್ಲ ಗಂಡಸರ ಹಿಂದೆ ನಿಂತರು. ಕುಲದ ಹಿರಿಯ ಭಯವನ್ನು ಮುಚ್ಚಿಟ್ಟುಕೊಳ್ಳುತ್ತ, 'ಯಾರೋ ನೀನು ?' ಎಂದು ಎತ್ತರದ ದನಿಯಲ್ಲಿ ಗದರಿದ.

'ಊ....ಊ...' ಅಂದನೇ ಹೊರತು ಬಾಯಿಯಿಂದ ಮಾತೇ ಹೊರಡಲಿಲ್ಲ. ಹುಚ್ಚು ಹುಚ್ಚಾಗಿ ನಕ್ಕ. ಪ್ರಾಣಿಯಂತೆ ಕೂಗಿದ. ಹಕ್ಕಿಯಂತೆ ಉಲಿದ. ಯಾರೇನೇ ಕೇಳಿದರು ಅದೇ ಪ್ರತಿಕ್ರಿಯೆ.

'ಲೋ ಇವನು ಹುಚ್ಚನಷ್ಟೇ ಅಲ್ಲ, ಮೂಕ ಕೂಡ. ಹಾಗಾದರೆ ಇವನಿಂದ ಯಾವುದೇ ತೊಂದರೆ ಇಲ್ಲ ಕಣ್ರೋ, ಇವನಿಗೆ ಯಾರಾದರೂ ಒಂದು ಅಂಗಿ, ಪಂಚೆ ತಂದುಕೊಡಿರೋ' ಎಂದ ಕುಲದ ಹಿರಿಯ. ಯಾರೂ ಅಲ್ಲಿಂದ ಕದಲಲೇ ಇಲ್ಲ. ಕೊನೆಗೆ ಕುಮಾರಪ್ಪನೇ ತನ್ನ ಮನೆಗೆ ಓಡಿ ಒಗೆದಿದ್ದ ತನ್ನ ಚೌಕಳಿ ಅಂಗಿ ಹಾಗೂ ಬಣ್ಣದ ಲುಂಗಿ ತಂದುಕೊಟ್ಟ. ಹಿರಿಯನ ಸೂಚನೆಯಂತೆ ಹುಚ್ಚನಿಗೆ ಲುಂಗಿ ಉಡಿಸಿ, ಹುರಿ ಒಂದನ್ನು ಉಡುದಾರದಂತೆ ಸುತ್ತಿ ಅದನ್ನು ಬಿಗಿ ಮಾಡಿದ. ಅಂಗಿ ತೊಡಿಸಲು ಹೋದರೆ ಹುಚ್ಚ ಅದನ್ನು ಕಿತ್ತುಕೊಂಡು ತನ್ನ ಭುಜದ ಮೇಲೆ ಹಾಕಿಕೊಂಡ!

ದಿನಗಳು ಕಳೆಯುತ್ತಿವೆ. ಹುಚ್ಚನ ಸಹವಾಸ ಎಲ್ಲರಿಗೂ ಒಗ್ಗಿಹೋಯಿತು. ಯಾರಾದರೂ ಒಂದಿಷ್ಟು ಕೊಟ್ಟರೆ ತಿನ್ನುತ್ತಾನೆ. ಊರು ತುಂಬಾ ಸುತ್ತುತ್ತಾನೆ. ಗಿಡಗಳ ನಡುವೆ ಸೇರಿ ಕೋತಿಗಳೊಂದಿಗೆ ಅವುಗಳ ಹಾಗೆ ಕಿಚ ಕಿಚ ಎನ್ನುತ್ತಾನೆ. ಕಾಗೆಗಳ ಜೊತೆ ಕಾಕಾ ಎನ್ನುತ್ತಾನೆ. ಅಳಿಲು ಬಂದರೆ ಅದರಂತೆ ಕೀಚ್ ಕೀಚ್ ಕೂಗುತ್ತಾನೆ. ಗುಬ್ಬಚ್ಚಿಗಳು ಬಂದರೂ ಹಾಗೆಯೇ. ಅವುಗಳಂತೆ ಸದ್ದು ಮಾಡುತ್ತಾ ಮಾತನಾಡಿಸುತ್ತಾನೆ. ಅದಿರಲಿ, ಒಂದು ದಿನ ನಾಗರಹಾವು ಬಂದಿದ್ದರೆ ನುಗ್ಗಿ ಅದರ ಕತ್ತನ್ನು ಹಿಡಿದುಕೊಂಡುಬಿಟ್ಟ. ಅದು ಸರಿಯುತ್ತ ಸರಿಯುತ್ತಾ ಅವನ ಕೈಯನ್ನು ಸುತ್ತಿಕೊಂಡಿತು. ಹೊರಚಾಚಿದ ಹೆಡೆಯಿಂದ ಅದು ಬುಸ್ ಬುಸ್ ಎನ್ನುತ್ತಿದ್ದರೆ ಇವನು ಕೂಡ ಅದರ ಭಾಷೆಯಲ್ಲೇ ಬುಸ್ ಬುಸ್ ಎಂದ. ಅಲ್ಲಿದ್ದವರೆಲ್ಲರೂ ಹೆದರಿ ಅದನ್ನು ಕೊಲ್ಲಲು ಅರಚಿದರು. ಆದರೆ ಹುಚ್ಚ ಅದನ್ನು ದೂರಕ್ಕೆ ಒಯ್ದು ಪೊದೆಗಳಲ್ಲಿ ಬಿಟ್ಟು ಬಂದ.

ಕುಮಾರಪ್ಪನೆಂದರೆ ಅವನಿಗೆ ಇನ್ನಿಲ್ಲದ ವಾತ್ಸಲ್ಯ. ಅವನ ತಾಯಿ ಹಾಗೂ ಆ ಮನೆ ಮಂದಿಯೆಲ್ಲ ಹುಚ್ಚನಿಗೆ ಬಹಳ ಇಷ್ಟ. ಅವರು ಕಾಣಿಸಿದರೆ ಸಾಕು, ದೂರದಲ್ಲಿದ್ದರೂ ತಣ್ಣಗೆ ಇರಿ ಎನ್ನುವಂತೆ ಕೈಯೆತ್ತಿ ಆಶೀರ್ವದಿಸುತ್ತಾನೆ. ಅದಕ್ಕೆ ತಕ್ಕಂತೆ ಕುಮಾರಪ್ಪ ಮನೆಯಲ್ಲಿನ ತಿನಿಸುಗಳನ್ನು ತಂದು